# ಹೋ ಚಿ ಮಿನ್

## ಸ್ವಾತಂತ್ರ್ಯ ಸೂರ್ಯ ಜನಕಾಳಜಿಯ ತೂರ್ಯ

ಭಾರತದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರಪಿತ ಎನ್ನುವ ಗೌರವಕ್ಕೆ ಪಾತ್ರರಾಗಿರುವಂತೆ, ಹೋ ಚಿ ಮಿನ್ ಅವರು ವಿಯೆಟ್ನಾಂನ ರಾಷ್ಟ್ರಪಿತ. ಗಾಂಧಿ ಪ್ರಭಾವಕ್ಕೊಳಗಾಗಿದ್ದರೂ ಹೊ ಅವರದು ಬೇರೆಯೇ ದಾರಿ. ಸೈನ್ಯವನ್ನು ಕಟ್ಟಿ ದೇಶದ ಸ್ವಾತಂತ್ರ್ಯಕ್ಕಾಗಿ ಯುದ್ಧ ಮಾಡಿದ ಈ ಸ್ವಾತಂತ್ರ್ಯಪ್ರೇಮಿ, ದೇಶದ ಪಾಲಿಗೆ ಸ್ವಾತಂತ್ರ್ಯಸೂರ್ಯನಾಗಿ ಪರಿಣಮಿಸಿದರು. ಜನಸಾಮಾನ್ಯರ ಹಿತದ ಬಗ್ಗೆ ಸದಾ ಚಿಂತಿಸುತ್ತಿದ್ದ ಅವರು ಸರಳತೆಯನ್ನು ಜೀವನದ ಭಾಗವಾಗಿಸಿಕೊಂಡಿದ್ದರು. ರಾಷ್ಟ್ರಪ್ರೇಮ–ರಾಷ್ಟ್ರೀಯತೆಯ ಪ್ರಭಾವಳಿಯಲ್ಲಿ ಬಡಬಗ್ಗರ ಸಂಕಷ್ಟಗಳು ಕಿಮ್ಮತ್ತು ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ, ಸ್ವಾತಂತ್ರ್ಯ ಪ್ರೇಮವನ್ನೂ ಜನಪರ ಕಾಳಜಿಯನ್ನೂ ಒಟ್ಟಿಗೆ ಕರೆದೊಯ್ಯುವ 'ಹೋ ಚಿ ಮಿನ್ ಮಾದರಿ' ಈ ಹೊತ್ತಿನ ಅಗತ್ಯ.

■ ಡಿ.ಜಿ. ಮಲ್ಲಿಕಾರ್ಜುನ

ನಾನು ಶ್ರಮಿಸುವಾಗ, ನೀವು ಕಾಯಕನಿರತರು
ನಾನು ಸೆರೆಮನೆಯಲ್ಲಿರುವೆ, ನೀವು
ಕಾರಾಗೃಹದಲ್ಲಿರುವಿರಿ
ಮೈಲುಗಟ್ಟಲೆ ದೂರ, ನಾವು ಭೇಟಿಯಾಗಲಿಲ್ಲ
ಮಾತನಾಡಲು ಆಗಲಿಲ್ಲ, ಆದರೂ ಅನುಕಂಪ
ವಿನಿಮಯವಾಗಿದೆ.

ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಹೋರಾಟದಲ್ಲಿ ಜವಾಹರಲಾಲ್ ನೆಹರೂ ಅವರು ಜೈಲಿಗೆ ಹೋದ ವಿಷಯವನ್ನು ತಿಳಿದ ಹೋ ಚಿ ಮಿನ್ ಬರೆದ ಕವನವಿದು. ಆಗ ಹೋ ಚಿ ಮಿನ್ ಗುಯಾಂಕ್ಸಿ ಜೈಲಿನಲ್ಲಿ ಬಂಧಿತರಾಗಿದ್ದರು.

### ಯಾರು ಈ ಹೋ ಚಿ ಮಿನ್?

'ವಿಯೆಟ್ನಾಂ ರಾಷ್ಟ್ರಪಿತ' ಎಂದೇ ಹೆಸರಾದ ಹೋ ಚಿ ಮಿನ್ ಅವರನ್ನು ವಿಯೆಟ್ನಾಮಿಯರು ಪ್ರೀತಿಯಿಂದ 'ಅಂಕಲ್ ಹೋ' ಎಂದು ಕರೆಯುವರು. ಅಖಂಡ ವಿಯೆಟ್ನಾಂ ಕನಸು ಕಂಡ ಹೋ ಚಿ ಮಿನ್ ತನ್ನ ಬದುಕನ್ನೆಲ್ಲಾ ದೇಶಕ್ಕಾಗಿಯೇ ಮುಡಿಪಿಟ್ಟವರು. ವಿಯೆಟ್ನಾಂ ಏಕೀಕರಣವಾಗುವ ಮುನ್ನವೇ ಅವರು 1969ರಲ್ಲಿ ತಮ್ಮ 80ನೇ ವಯಸ್ಸಿನಲ್ಲಿ ನಿಧನರಾದರು.



ವಿಯೆಟ್ನಾಂನ ಅಂಚೆ ಚೀಟಿಗಳಲ್ಲಿ ಅಂಕಲ್ ಹೋ

'ಒನಕೆ ಪೆಟ್ಟು ಬಿದ್ದಾಗ ಭತ್ತ ನೋವನ್ನು ಅನುಭವಿಸುತ್ತದೆ. ಆದರೆ ಒಮ್ಮೆ ಕಠಿಣ ಪರೀಕ್ಷೆಯಿಂದ ಹೊರಬಂದೊಡನೆಯೇ ಅಕ್ಕಿಯ ಬಿಳುಪು ಎಷ್ಟೊಂದು ಚೆನ್ನ ಅಲ್ಲವೇ? ಇದೇ ರೀತಿ ನಮ್ಮ ಬದುಕು. ಒಂದು ಜೀವ ಮನುಷ್ಯನಾಗಲು ಈ ರೀತಿಯ ನೋವನ್ನು ಅನುಭವಿಸಲೇಬೇಕು' ಎಂಬ ಹೋ ಚಿ ಮಿನ್ ಅವರ ಅನುಭವದ ಮಾತುಗಳು ಇಡೀ ವಿಯೆಟ್ನಾಂ ದೇಶದ ಚರಿತ್ರೆ ಮತ್ತು ವರ್ತಮಾನದ ಕಥೆಯನ್ನು ಹೇಳುತ್ತದೆ.

ಹೋ ಚಿ ಮಿನ್ ತಾವು ಸತ್ತ ನಂತರ ತಮ್ಮ ಮೃತದೇಹವನ್ನು ಹೂಳಬೇಕೆಂದು ಬಯಸಿದ್ದರೂ, ವಿಯೆಟ್ನಾಂ ಸರ್ಕಾರ ಅವರ ಸ್ಮಾರಕವನ್ನು ನಿರ್ಮಿಸಿ, ಅವರ ಮೃತದೇಹವನ್ನು ಸಂರಕ್ಷಿಸಿ, ಸಾರ್ವಜನಿಕರ ಪ್ರದರ್ಶನಕ್ಕಿಟ್ಟು, ಸ್ಫೂರ್ತಿಯ ಸೆಲೆಯಾಗಿಸಿದ್ದಾರೆ. ಹೋ ಚಿ ಮಿನ್ ಅವರ ಬದುಕಿನ ಆಶಯ, ವಿಯೆಟ್ನಾಂ ಜನರ ಕೆಚ್ಚೆದೆ, ಹೋರಾಟದ ಮನೋಭಾವ, ಜಿಗುಟುತನದ ಪ್ರತೀಕವಾಗಿ ಈ ಸ್ಮಾರಕ ಎದ್ದು ನಿಂತಿದೆ. ವಿಯೆಟ್ನಾಂ ರಾಜಧಾನಿ ಹನಾಯ್ ನಗರದಲ್ಲಿರುವ ಈ ಸ್ಮಾರಕ ಪ್ರತಿಯೊಬ್ಬರೂ ನೋಡಲೇಬೇಕಾದ ಸ್ಥಳ.

ಮಾಸ್ಕೋದಲ್ಲಿನ ಲೆನಿನ್ ಸ್ಮಾರಕದ ಮಾದರಿಯಲ್ಲಿ ಹೋ ಚಿ ಮಿನ್ ಅವರ ಸ್ಮಾರಕವನ್ನು 1975ರಲ್ಲಿ ನಿರ್ಮಿಸಲಾಯಿತು. ವಿಶೇಷವೆಂದರೆ, 'ಬಾ ದಿನ್ ಸ್ಕ್ವೇರ್' ಎಂದು ಕರೆಯುವ ಈ ಪ್ರದೇಶದಲ್ಲಿ ಹೋ ಚಿ ಮಿನ್

